**<u>ಕರ್ನಾಟಕ ಸರ್ಕಾರ</u>**

ಸಂ. ಆರ್ 158 ಟಿಎನ್ಆರ್ 2020 (ಪಿ 1)

ಕರ್ನಾಟಕ ಸರ್ಕಾರಿ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 06-05-2020

## <u>ಸ್ಪಷ್ಟೀಕರಣ</u>

ಸರ್ಕಾರದ ಆದೇಶ ಸಂಖ್ಯೆ. ಆರ್ 158 ಟಿಎನ್ಆರ್ 2020, ದಿ.02-05-2020ರಲ್ಲಿ ಕೋವಿಡ್-19 ವೈರಾಣು ಸಂಬಂಧವಾಗಿ ಕರ್ನಾಟಕ ರಾಜ್ಯವು ಹೊಸ ಮಾರ್ಗಸೂಚಿಗಳನ್ನು ಹೊರಡಿಸಿದೆ ಹಾಗೂ ಈ ಮಾರ್ಗಸೂಚಿಗಳು ದಿ.03.05.2020 ರಿಂದ ಎರಡು ವಾರಗಳ ಅವಧಿಗೆ ಜಾರಿಯಲ್ಲಿರುತ್ತವೆ.

ಎಲ್ಲಾ ವಲಯಗಳಲ್ಲಿ ಅನುಮತಿಸಲಾದ ಚಟುವಟಿಕೆಗಳು ಪ್ರಾರಂಭವಾದಂತೆ, ಕಾರ್ಮಿಕರಿಗೆ ಹಾಗು ಸಿಲುಕಿಕೊಂಡಿರುವ ವ್ಯಕ್ತಿಗಳಿಗೆ ಆಹಾರದ ಬೇಡಿಕೆ ಹೆಚ್ಚುತ್ತಿದೆ. ಮೇಲೆ ತಿಳಿಸಲಾದ ಮಾರ್ಗಸೂಚಿಗಳ ಪ್ರಕಾರ, ವಸತಿ, ಆರೋಗ್ಯ, ಪೊಲೀಸ್, ಸರ್ಕಾರಿ ಅಧಿಕಾರಿಗಳು, ಆರೋಗ್ಯ ಕಾರ್ಯಕರ್ತರು ಸೇರಿದಂತೆ ಸಿಲುಕಿಕೊಂಡಿರುವ ಪ್ರವಾಸಿಗರು, ಕ್ವಾರಂಟೈನ್‌ನಲ್ಲಿರುವ ವ್ಯಕ್ತಿಗಳಿಗೆ ಹೋಟೆಲ್ ಮತ್ತು ರೆಸ್ಟೋರೆಂಟ್ ಮೂಲಕ ಆಹಾರವನ್ನು ಒದಗಿಸುವುದನ್ನು ಹೊರತುಪಡಿಸಿ, ಇತರೆ ಎಲ್ಲಾ ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳ ಸೇವೆಗಳನ್ನು ನಿಷೇಧಿಸಲಾಗಿದೆ.

ಆದಾಗ್ಯೂ, ಹೋಟೆಲ್‌ಗಳ ಮತ್ತು ರೆಸ್ಟೋರೆಂಟ್‌ಗಳ ಅಡಿಗೆ ಮನೆಗಳಲ್ಲಿನ ಸೇವೆಯನ್ನು ಸಿದ್ಧಪಡಿಸಿದ ಆಹಾರವನ್ನು ಪಾರ್ಸಲ್ (take away) ಮತ್ತು ಮನೆ ವಿತರಣೆಗೆ (home delivery) ಮಾತ್ರ ಕಾರ್ಯನಿರ್ವಹಿಸಲು ಅನುಮತಿಸಲಾಗಿದೆ ಎಂದು ಸ್ಪಷ್ಟಪಡಿಸಿದೆ.

COVID-19ರ ನಿರ್ವಹಣೆಗೆ ರಾಷ್ಟ್ರೀಯ ನಿರ್ದೇಶನಗಳನ್ವಯ ಅಂತಹ ಎಲ್ಲಾ ಕಾರ್ಯಾಚರಣೆಗಳಲ್ಲಿ ಸಾಮಾಜಿಕ ಅಂತರವನ್ನು ಕಡ್ಡಾಯವಾಗಿ ಕಾಪಾಡಿಕೊಳ್ಳತಕ್ಕದ್ದು.

ಟಿಎಂವಿಜಯಭಾಸ್ಕರ್

**(ಟಿ.ಎಂ. ವಿಜಯ್ ಭಾಸ್ಕರ್)**
ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ
ಅಧ್ಯಕ್ಷರು, ರಾಜ್ಯ ಕಾರ್ಯಕಾರಿ ಸಮಿತಿ,
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ

**ಇವರಿಗೆ,**
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.